
**ತೆಲುಗು ಮೂಲ: ಗಂಗುಲ ನರಸಿಂಹರೆಡ್ಡಿ**
**ಕನ್ನಡಕ್ಕೆ: ಜಾಜಿ ದೇವೇಂದ್ರಪ್ಪ**

# ಮಳೆ ಸೆಳಕು



ಬೆಳದಿಂಗಳು ಹತ್ತಿ ಹೂವಿನಂತಿದೆ. ಆಕಾಶದ ತುಂಬ ಅಲ್ಲಲ್ಲಿ ಮೋಡಗಳು ಹತ್ತಿಯ ಕುಪ್ಪೆಯಂತಿವೆ. ಚಂದಿರ ಬಿರಿಯುವ ಹತ್ತಿಕಾಯಿಯಂತಿದ್ದಾನೆ. ಮನೆ ಮುಂದಣ ಮಂಚದ ಮೇಲೆ ಎರಡು ಕೈಗಳನ್ನು ತಲೆಕೆಳಗಿಟ್ಟುಕೊಂಡು ಅಂಗಾತ ಮಲಗಿರುವ ಅನಂತರೆಡ್ಡಿಯ ತಲೆತುಂಬ ಭಯದ ಮೋಡಗಳು ಆವರಿಸಿಕೊಂಡಿವೆ. ಮಗಳ ಮದುವೆಗೆ ಮಾಡಿದ ಸಾಲ ಹಸಿರು ಹುಳದಂತೆ ಎದೆಯನ್ನು ಕೊರೆಯುತ್ತಿದೆ. ಭವಿಷ್ಯತ್ತು ಬಿಳಿಸೊಳ್ಳೆಯಂತೆ ಕಾಡುತ್ತಿದೆ.

'ಮಳೆ ಬಂದ್ರೆ ಬೇಸಿತ್ತು, ಕಂಬಳಿ ತೋಯುವಷ್ಟು ಮಳೆ ಬಂದ್ರೆ ಬಾಳ ಬೇಸಿತ್ತು.'

ಹೀಗೆ ಕಳೆದ ಹತ್ತು ದಿನಗಳಿಂದ ನೂರಾರು ಸಲ ಅಂದುಕೊಂಡಾಯ್ತು. ಮಳೆಯನ್ನು ಎದುರು ನೋಡುತ್ತಲೇ ಇದ್ದ ಈತನ ಕಣ್ಣುಗಳು ಹತ್ತಿಕಾಯಿಯಂತಾಗಿವೆ. ಆದರೂ ಆ ಮಳೆಗೆ ಕರುಣೆ ಬರಲಿಲ್ಲ. ಒಂದು ಮಳೆ ಬಂದರೂ ಸಾಕು ಹಾಕಿದ್ದನ್ನ ಬರುತ್ತೆ, ಒಂದು ಮಳೆ ಬಂದರೂ ಸಾಕು ಹತ್ತಿ ಹೊಲ ಇನ್ನೊಂದು ಹತ್ತು ಹದಿನೈದು ದಿನ ಜೀವ ಹಿಡಿದುಕೊಳ್ಳುತ್ತದೆ.

ಆತನ ನರನಾಡಿಗಳಲ್ಲಿಯೂ ಹತ್ತಿ ಹೊಲ, ಕ್ಷಣಕ್ಷಣಕ್ಕೂ ಹತ್ತಿ ಹೊಲ.

